ಬಿಡುತ್ತೇನೆ. ಅದಕ್ಕೇ ಅವು ಹೀಗೆ ಮೈಮೇಲೆ ಹತ್ತಿ ಕುಣಿಯುತ್ತವೆ. ಈಗ ತಲೆಯ ಮೇಲೆ ನಾರಾಯಣನನ್ನು ಹತ್ತಿಸಿಕೊಂಡಾಗಿದೆ. ಹಾಗಾಗಿ ತನ್ನ ಮನವನ್ನು ಆಕ್ರಮಿಸಿಕೊಂಡಿರುವ ಈತನ ಬಗ್ಗೆ ತಾನು ಆದಷ್ಟು ಬೇಗ ಕಥೆ ಬರೆದು ಇವನಿಂದ ಮುಕ್ತಿ ಪಡೆಯಬೇಕು ಎಂದು ಕುಮಾರ ನಿರ್ಧರಿಸಿದನು. ಏನಾದರೂ ಮಾಡಿ ಇಂದು ನಾರಾಯಣನನ್ನು ಭೇಟಿಮಾಡಿ ಅವನ ಕಥೆ ಕೇಳಲೇಬೇಕು ಎಂದು ನಿಶ್ಚಯಿಸಿ ಸಂಜೆ ಬೇಗ ಮನೆಗೆ ಬಂದನು. ಬಂದವನೇ ಬಟ್ಟೆ ಬದಲಿಸಿ, ನಾರಾಯಣನ ಮನೆಯ ಕಡೆಗೆ ಹೊರಟ. ಕಳೆದ ಬಾರಿ ತನ್ನ ಮನೆಗೆ ಬಂದಿದ್ದಾಗ ಹೇಳಿದ್ದ ಹಳೆಯ ವಠಾರದಂತಿದ್ದ ಅವನ ಮನೆಯ ವಿಳಾಸವನ್ನು ಸುಲಭವಾಗಿ ಪತ್ತೆಹಚ್ಚಿ ಅವನ ರೂಮಿನ ಹತ್ತಿರ ಬಂದು ಬಾಗಿಲು ಬಡಿದ. ಬನಿಯನ್ ಮತ್ತು ಲುಂಗಿಯಲ್ಲಿದ್ದ ನಾರಾಯಣನೇ ಬಂದು ಬಾಗಿಲು ತೆರೆದ. ಕುಮಾರನನ್ನು ತನ್ನ ಮನೆಯ ಬಾಗಿಲಿನಲ್ಲಿ ಕಂಡು ಆಶ್ಚರ್ಯ ಮತ್ತು ಸಂತೋಷವನ್ನು ಒಟ್ಟಿಗೆ ಪ್ರದರ್ಶಿಸುತ್ತಾ, 'ಬನ್ನಿ ಸಾರ್' ಎಂದು ಒಳಗೆ ಕರೆದು ಕುಳಿತುಕೊಳ್ಳಲು ಪ್ಲಾಸ್ಟಿಕ್ ಚೇರ್ ಹಾಕಿದ. ಅವನಿದ್ದಿದ್ದು ಒಂದು ಪುಟ್ಟದಾದ ರೂಮು, ಅದರೊಳಗೆ ಒಂದು ಮೂಲೆಯಲ್ಲಿ ಬಾತ್‌ರೂಮ್ ಇತ್ತು. ಆ ಪುಟ್ಟ ರೂಮಿನಲ್ಲೇ ಅವನ ಬಟ್ಟೆಗಳು, ಒಂದೆರಡು ಪಾತ್ರೆಗಳು, ಹಾಸಿಗೆ ಇದ್ದವು. ಬಹಳ ಸಂಕೋಚ ಪ್ರದರ್ಶಿಸುತ್ತಾ ನಾರಾಯಣನು 'ಏನು ವಿಷಯ ಸರ್, ನನ್ನಂತಹ ಬಡವನ ಮನೆಗೆ ತಾವು ದಯಮಾಡಿಸಿದ್ದು?' ಎಂದ. 'ನೋಡಯ್ಯ, ನೀನು ನನಗೆ ಆ ದಿನ ಸಹಾಯ ಮಾಡಿದ್ದೀಯಾ. ನಿನ್ನನ್ನು ನೋಡಿದರೆ ಬಹಳ ಕಷ್ಟದಲ್ಲಿದ್ದಂತೆ ತೋರುತ್ತದೆ. ನೀನು ನಿನ್ನ ಸಮಸ್ಯೆಗಳನ್ನು ಹೇಳಿಕೊಂಡರೆ ನಾನು ನನ್ನ ಕೈಲಾದಮಟ್ಟಿಗೆ ಸಹಾಯ ಮಾಡುತ್ತೇನೆ. ನಾನು ಕಥೆಗಾರ ಕಣಯ್ಯಾ. ಮುಖ ನೋಡಿದರೆ ಸಾಕು, ನಿನ್ನ ಮನಸ್ಸಿನ ತಾಕಲಾಟಗಳನ್ನು ಹೇಳಬಲ್ಲೆ. ನೀನು ಯಾವುದೋ ನೋವಿನಲ್ಲಿ ಇದ್ದೀಯೆಂದು ನನಗೆ ಅನಿಸುತ್ತಿದೆ. ನೀನು ಮನಸ್ಸು ಬಿಚ್ಚಿ ಹೇಳಿದರೆ ನಿನ್ನ ಬಗ್ಗೆ ಒಂದು ಕಥೆಯನ್ನು ಬರೆಯುತ್ತೇನೆ' ಎಂದನು. ನಾರಾಯಣನನ್ನು ಇಲ್ಲಿಯವರೆಗೆ ಇಷ್ಟು ಪ್ರೀತಿಯಿಂದ ಯಾರೂ ಮಾತನಾಡಿಸಿರಲಿಲ್ಲ, ಅವನ ಸಮಸ್ಯೆಗಳನ್ನು ಕೇಳುವವರಿರಲಿಲ್ಲ. ಆದ್ದರಿಂದ ಕುಮಾರನು ಸ್ವಲ್ಪ ಸಹಾನುಭೂತಿ ತೋರಿಸಿದ ತಕ್ಷಣ ಅವನ ಕಣ್ಣುಗಳು ತುಂಬಿಬಂದವು. 'ಸರ್ ನಿಮ್ಮಂತಹ ಕಥೆಗಾರರು ನಮ್ಮ ಮನೆ ಬಾಗಿಲಿಗೆ ಬಂದು ನನ್ನ ಕಥೆ ಕೇಳುತ್ತಿರುವುದು ನನ್ನ ಸೌಭಾಗ್ಯ. ಆದರೆ ನನ್ನ ಕಥೆ ಅಂತಹ ಒಳ್ಳೆಯ ಕಥೆಯೇನೂ ಅಲ್ಲ ಬಿಡಿ. ಇದೊಂದು ನಂಬಿಕೆ ದ್ರೋಹದ, ಬೆನ್ನಿಗೆ ಚೂರಿ ಹಾಕಿದ ಕಥೆ ಸರ್' ಎಂದು ತನ್ನ ಕಥೆ ಹೇಳಲು ಶುರುಮಾಡಿದ.

'ನೋಡಿ ಸರ್, ನಾನು ಕೆಳಮಧ್ಯಮ ವರ್ಗದಲ್ಲಿ ಹುಟ್ಟಿ ಬಡತನದಲ್ಲಿಯೇ ಪಿಯುಸಿಯವರೆಗೆ ಓದಿದೆ. ಸಣ್ಣಸಣ್ಣ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುತ್ತಲೇ ಊರಿನಲ್ಲಿದ್ದ ನನ್ನ ಅಪ್ಪ-ಅಮ್ಮ ಮತ್ತು ಕುಟುಂಬವನ್ನು ಸಾಕಿದೆ. ಮದುವೆಯಾಗಲು ಮೊದಲಿಗೆ ನನಗೆ ಯಾವುದೇ ಸಂಬಂಧಗಳು ಕೂಡಿಬರಲಿಲ್ಲ. ಕೊನೆಗೆ ಯಾವುದೋ ಒಂದು ಹಳ್ಳಿಯ ನಮಗಿಂತ ಬಡವರಾದ ಹುಡುಗಿಯನ್ನು ನೋಡಿ ಮದುವೆಯಾದೆ. ಬಡತನವಿದ್ದರೂ ಹುಡುಗಿ ನನಗಿಂತ ಹೆಚ್ಚು ಓದಿಕೊಂಡವಳಾಗಿದ್ದಳು. ಅವಳಿಗೂ ಯಾರೂ ಗತಿ ಇರಲಿಲ್ಲ, ನನಗೂ ಮದುವೆಯ ವಯಸ್ಸು ಮೀರಿದ್ದ ಕಾರಣದಿಂದ ನಮ್ಮಿಬ್ಬರ ಜೋಡಿ ಕೂಡಿ, ನಮಗಿಬ್ಬರಿಗೂ ಮದುವೆಯಾಯಿತು. ನಂತರ ನಮಗೆ ಒಬ್ಬ ಮಗಳು ಜನಿಸಿದಳು. ಕಾಲಕ್ರಮೇಣ ನಮ್ಮಿಬ್ಬರ ನಡುವೆ ಎಲ್ಲಾ ಗಂಡ- ಹೆಂಡತಿಯರ ನಡುವೆ ನಡೆಯುವಂತೆ ಹಲವಾರು ಜಗಳಗಳೂ, ಭಿನ್ನಾಭಿಪ್ರಾಯಗಳೂ ಶುರುವಾದವು. ನಮ್ಮಿಬ್ಬರಲ್ಲಿ ಬಹಳ ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಕಥೆ ಕಾದಂಬರಿ ಓದುವ ವಿಷಯದಲ್ಲಿ ಸಾಮ್ಯತೆಗಳಿದ್ದವು. ಅವಳು ನನ್ನಂತೆಯೇ ಕಥೆ, ಕಾದಂಬರಿಯನ್ನು ವಿಪರೀತ ಓದುತ್ತಿದ್ದಳು. ಅವಳಿಗೆ ಎಲ್ಲಾ ತಾಯಂದಿರಿಗೆ ಇರುವಂತೆ ತಮ್ಮ ಮಗಳು ಒಳ್ಳೆಯ ಶಾಲೆಯಲ್ಲಿ ಓದಿ, ಒಳ್ಳೆಯ ಸ್ಥಾನಕ್ಕೆ ಹೋಗಬೇಕೆಂಬ ಆಸೆಯಿತ್ತು. ಇರಲಿ, ಅದು ಎಲ್ಲಾ ತಂದೆತಾಯಂದಿರಿಗೂ ಇರುವ ಆಸೆಯೇ. ಆದರೆ ಅವಳ ಆಸೆ ಮತ್ತಷ್ಟು ದೊಡ್ಡದಾಗಿ ಗರಿಗೆದರಿದ್ದು ನನಗೆ ಗಲ್ಫ್ ದೇಶವಾದ ಒಮಾನ್‌ನಲ್ಲಿ ಯಾವುದೋ ಕಂಪನಿಯಲ್ಲಿ ಆಫೀಸ್ ಬಾಯ್ ಆಗಿ ಒಳ್ಳೆಯ ಸಂಬಳದ ಕೆಲಸ ಸಿಗುತ್ತದೆಯೆಂದು ಅವಳಿಗೆ ಹೇಳಿದಾಗ, 'ಆ ಕೆಲಸವನ್ನು ಒಪ್ಪಿಕೊಂಡು ಹೋಗಿ ಬನ್ನಿ, ಹೊರದೇಶಗಳಿಗೆ ಹೋಗಿ ಬಂದರೆ ಬಹಳ